جـــامـــعة الـــهند الإســـلامـــية
JAMIATHUL HIND AL ISLAMIYYA

# ಜಾಮಿಯತುಲ್ ಹಿಂದ್ ಅಲ್ ಇಸ್ಲಾಮಿಯ್ಯ ಏಕ ಜಾಲಗ ಪ್ರವೇಶ

## ಪ್ರಮುಖ ಸಂಶಯಗಳು ಮತ್ತು ಉತ್ತರಗಳು

### ಜಾಮಿಯತುಲ್ ಹಿಂದ್ ಅಲ್ ಇಸ್ಲಾಮಿಯ್ಯವನ್ನು ಪರಿಚಯಿಸಬಹುದೇ?

ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಭಾರತದಲ್ಲಿರುವ ಅತಿದೊಡ್ಡ ಅಫ್ಲಿಯೇಟಿಂಗ್ ಇಸ್ಲಾಮಿಕ್ ವಿಶ್ವವಿದ್ಯಾಲಯವಾಗಿದೆ ಜಾಮಿಯತುಲ್ ಹಿಂದ್ ಅಲ್ ಇಸ್ಲಾಮಿಯ್ಯ. ಕೇರಳ ಮತ್ತು ಇತರ ಪ್ರದೇಶಗಳಲ್ಲಾಗಿ 300 ಕ್ಕೂ ಹೆಚ್ಚು ಅಫ್ಲಿಯೇಟಡ್ ಕಾಲೇಜುಗಳು, ಹತ್ತುಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು,4000 ಅಲುಮ್ನಿ, 2000+ ಮುದರ್ರಿಸರು ಮತ್ತು ಅಧ್ಯಾಪಕರು,40+ ಪಬ್ಲಿಕೇಶನ್ಸ್, 3000 ಹಾದಿ ಮತ್ತು ಮುಹ್ತದಿ ಬಿರುದುದಾರಿಗಳು ಸೇರಿದಂತೆ ನವ ವಿದ್ಯಾರ್ಥಿಗಳ ಪ್ರಗತಿಗಾಗಿ ಸಜ್ಜೀಕರಿಸಲಾದ ಅತಿದೊಡ್ಡ ಜ್ಞಾನಸಾಮ್ರಾಜ್ಯವಾಗಿದೆ ಜಾಮಿಯತುಲ್ ಹಿಂದ್.

### ಜಾಮಿಯತುಲ್ ಹಿಂದ್ ಏಕ ಜಾಲಗ ವ್ಯವಸ್ಥೆ ಎಂದರೇನು? ಸ್ಪಷ್ಟಪಡಿಸುವಿರಾ?

ವಿಧ್ಯಾರ್ಥಿಗಳಿಗೆ 8 ಮತ್ತು 11ನೇ ತರಗತಿಗಳಿಗೆ ಜಾಮಿಯತುಲ್ ಹಿಂದ್ ಏಕ ಜಾಲಗ ವ್ಯವಸ್ಥೆಯ ಮೂಲಕ ಪ್ರವೇಶ ನೀಡಲಾಗುತ್ತದೆ.ಒಂದೇ ಅರ್ಜಿ ಮತ್ತು ಪರೀಕ್ಷೆಯ ಮೂಲಕ ಜಾಮಿಯತುಲ್ ಹಿಂದ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 300 ಕ್ಕೂ ಹೆಚ್ಚು ಸಂಸ್ಥೆಗಳಲ್ಲೊಂದರಲ್ಲಿ ತ್ವರಿತ ಪ್ರವೇಶವನ್ನು ಪಡೆಯಬಹುದು. ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.ನಂತರ ಲಿಖಿತ ಪರೀಕ್ಷೆ ಮತ್ತು ಇಂಟರ್ವ್ಯೂ ನಡೆಯಲಿದೆ.ವಿದ್ಯಾರ್ಥಿಗಳು ಒಂದು, ಎರಡು

ಹಾಗೂ ಸ್ಪಾಟ್ ಅಲೋಟ್‌ಮೆಂಟ್‌ಗಳ ಮೂಲಕ ತಮ್ಮಿಷ್ಟದ ಸಂಸ್ಥೆಗಳನ್ನು ಆಯ್ಕೆ ಮಾಡಬಹುದು. ಲಿಖಿತ ಪರೀಕ್ಷೆ, ಇಂಟರ್ವ್ಯೂ ಮತ್ತು ಇತರ ಗ್ರೇಸ್ ಅಂಕಗಳನ್ನು ನೋಡಿಯಾಗಿದೆ ರ್‍ಯಾಂಕ್ ಪಟ್ಟಿಯನ್ನು ತಯಾರಿಸುವುದು ಮತ್ತು ಆದ್ಯತೆಯ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯಲು ಪರಿಗಣಿಸುವುದು.

### ಜಾಮಿಯತುಲ್ ಹಿಂದ್ ಏಕ ಜಾಲಗ ವ್ಯವಸ್ಥೆಯು ಸಾಮಾನ್ಯವಾಗಿ ಅರ್ಥೈಸಿಕೊಳ್ಳುವ 'ಏಕ ಜಾಲಗ ವ್ಯವಸ್ಥೆ'ಗೆ ಸಮಾನವೇ?

ಹೌದು, ಇಲ್ಲೂ ವಿದ್ಯಾರ್ಥಿಗಳೇ ತಮ್ಮಿಷ್ಟದ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.ರ್‍ಯಾಂಕಿನ ಆಧಾರದ ಮೇಲೆ ಆಯ್ಕೆ ಮಾಡಿದ ಸಂಸ್ಥೆಯಲ್ಲಿ ಪ್ರವೇಶವನ್ನೂ ನೀಡಲಾಗುತ್ತದೆ. NEET ಮತ್ತು KEAM ಪರೀಕ್ಷೆಗಳ ಮಾದರಿಯನ್ನೇ ಇಲ್ಲಿಯೂ ಅಳವಡಿಸಿಕೊಳ್ಳಲಾಗಿದೆ.

### ಪ್ರವೇಶ ಪರೀಕ್ಷೆಗೆ (J-SAT ಪರೀಕ್ಷೆ) ಅರ್ಜಿ ಸಲ್ಲಿಸುವುದು ಹೇಗೆ?

J-SAT ಪ್ರವೇಶ ಪರೀಕ್ಷೆಯ ಮೂಲಕವಾಗಿದೆ ವಿದ್ಯಾರ್ಥಿಗಳ ರ್‍ಯಾಂಕ್ ತೀರ್ಮಾನಿಸುವುದು ಮತ್ತು ಪ್ರವೇಶವನ್ನು ನೀಡುವುದು. www.jamiathulhind.com ವೆಬ್‌ಸೈಟ್ ಮೂಲಕ ಈ ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಬಹುದು.

### ಪ್ರವೇಶ ಪರೀಕ್ಷೆಗೆ ವಯಸ್ಸಿನ ಮಿತಿ ಇದೆಯೇ? ಯಾರಿಗೆಲ್ಲಾ ಅರ್ಜಿ ಸಲ್ಲಿಸಬಹುದು?

ಇದೆ.ಗರಿಷ್ಠ ವಯೋಮಿತಿ - 8 ನೇ ತರಗತಿಗೆ ಹದಿನೈದು ವರ್ಷ ಮತ್ತು ಪ್ಲಸ್ ಒನ್‌ಗೆ ಹದಿನೆಂಟು ವರ್ಷ (ಈ ವಯೋಮಿತಿ ಮೀರಿದ ವಿದ್ಯಾರ್ಥಿಗಳಿಗೆ ಏಕ ಜಾರಿಗೆ ವ್ಯವಸ್ಥೆಯ ಮೂಲಕ ಪ್ರವೇಶ ನೀಡಲಾಗುವುದಿಲ್ಲ,ಆದರೆ ಜಾಮಿಯತುಲ್ ಹಿಂದ್ ಕಛೇರಿಯ ಮೂಲಕ ಅಧ್ಯಯನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.ಇದಕ್ಕಾಗಿ ನೇರವಾಗಿ ಕಛೇರಿಯನ್ನು ಸಂಪರ್ಕಿಸಬೇಕು)

7 ಮತ್ತು 10 ನೇ ತರಗತಿಗಳನ್ನು ಪೂರ್ತಿಗೊಳಿಸಿದವರು ಕ್ರಮವಾಗಿ 8 ಮತ್ತು 11 ನೇ ತರಗತಿಗಳಿಗೆ ಅರ್ಜಿ ಸಲ್ಲಿಸಬಹುದು.

### ಹೆಣ್ಣು ಮಕ್ಕಳಿಗೆ ಕೋರ್ಸ್‌ಗಳು ಲಭ್ಯವಿದೆಯೇ?

ಈಗ ಮುಸ್ಲಿಂ ಹುಡುಗರಿಗೆ ಮಾತ್ರ ಅರ್ಜಿಯನ್ನು ಆಹ್ವಾನಿಸಲಾಗಿದೆ. ಕೋರ್ಸ್‌ಗಳು ಸಂಪೂರ್ಣವಾಗಿ ವಸತಿಯುತವಾಗಿರುತ್ತವೆ.

### ಜಾಮಿಯತುಲ್ ಹಿಂದ್ ನೀಡುತ್ತಿರುವ ಕೋರ್ಸ್‌ಗಳು ಯಾವುದೆಲ್ಲಾ?

ಆಳವಾದ ಇಸ್ಲಾಮಿಕ್ ಅಧ್ಯಯನ ಮತ್ತು ಭೌತಿಕ ಅಧ್ಯಯನಗಳ ಸಮನ್ವಯ ವಿನೂತನ ಶಿಕ್ಷಣ ಕೋರ್ಸುಗಳಾಗಿದೆ ಜಾಮಿಯತುಲ್ ಹಿಂದ್ ನೀಡುತ್ತಿರುವುದು. ಕೋರ್ಸ್‌ಗಳ ಹೆಸರುಗಳು ಕೆಳಗೆ ನೀಡಲಾಗಿದೆ:

1. Foundational & Intermediate Programs
2. Bachelor's Programs
3. Master's Programs
4. Research Programs and Projects
5. Advanced Post Graduate Diploma Courses
6. Short-run Courses and Certificate Programs

(ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ (www.jamiathulhind.com) ಪಠ್ಯಕ್ರಮ ಲಭ್ಯವಿದೆ)

### 7 ನೇ ತರಗತಿ ಉತ್ತೀರ್ಣರಾದವರಿಗೆ ಯಾವ ಕೋರ್ಸ್ ನೀಡಲಾಗುತ್ತದೆ?

7 ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ತದನಂತರದ ಶಾಲಾ ಶಿಕ್ಷಣದ ಜೊತೆಗೆ ಪ್ಲಸ್ ಟು, ಡಿಗ್ರೀ, ಪಿಜಿ, ಪಿಎಚ್‌ಡಿ ವರೆಗೆ ಮತ್ತು ಸಾಂಪ್ರದಾಯಿಕ ಧಾರ್ಮಿಕ ಶಿಕ್ಷಣ ಫೌಂಡೇಶನ್ ನಿಂದ ಮುತವ್ವಲ್ (ಪಿಜಿ) ವರೆಗೂ ಅದರ ನಂತರ ಹೆಚ್ಚಿನ ಅಧ್ಯಯನಕ್ಕೂ ಅವಕಾಶವಿದೆ.

### 10 ನೇ ತರಗತಿ ಉತ್ತೀರ್ಣರಾದವರಿಗೆ ಯಾವ ರೀತಿಯ ಕೋರ್ಸ್‌ಗಳು ಲಭ್ಯವಿದೆ?

10 ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಲೌಕಿಕ ಶಿಕ್ಷಣ ಪ್ಲಸ್ ಟು, ಡಿಗ್ರೀ, ಪಿಜಿ, ಪಿಎಚ್‌ಡಿ ವರೆಗೆ ಮತ್ತು ಸಾಂಪ್ರದಾಯಿಕ ಧಾರ್ಮಿಕ ಶಿಕ್ಷಣ ಫೌಂಡೇಶನ್ ನಿಂದ ಮುತವ್ವಲ್ (ಪಿಜಿ) ವರೆಗೂ ಕಲಿಯಬಹುದು. ಹೆಚ್ಚಿನ ಅಧ್ಯಯನಕ್ಕೂ ಅವಕಾಶವಿದೆ.

### ಪ್ರವೇಶ ಪರೀಕ್ಷೆಯ ರೀತಿ ಮತ್ತು ವಿಧಾನವನ್ನು ವಿವರಿಸುವಿರಾ?

ವಿದ್ಯಾರ್ಥಿಗಳು J-SAT ಪ್ರವೇಶ ಪರೀಕ್ಷೆಯ ಮೂಲಕ ಜಾಮಿಯತುಲ್ ಹಿಂದ್ ಅಧೀನದಲ್ಲಿರುವ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯಬಹುದು. ಲಿಖಿತ ಪರೀಕ್ಷೆಯ 75ರಷ್ಟು ಪ್ರಶ್ನೆಗಳು ಶಾಲಾ ಪಠ್ಯಕ್ರಮವನ್ನು ಆಧರಿಸಿ ಹಾಗೂ 25 ಶೇಕಡಾ ಧಾರ್ಮಿಕ ಪ್ರಶ್ನೆಗಳಾಗಿರುತ್ತದೆ. ಮಾದರಿ ಪ್ರಶ್ನೆ ಪತ್ರಿಕೆ ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. (ಪ್ರಶ್ನೆಗಳ ವಿಧಾನ, ಪ್ರಮಾಣ ಮತ್ತು ಗುಣಮಟ್ಟವು ಜಾಮಿಯತುಲ್ ಹಿಂದ್ ನಿರ್ಧರಿಸಿದಂತೆ ಇರುತ್ತದೆ).

ಪ್ರವೇಶ ಪರೀಕ್ಷೆ ಮತ್ತು ಇಂಟರ್ವ್ಯೂ ಒಂದೇ ಕೇಂದ್ರದಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಯು ಈ ಕೇಂದ್ರವನ್ನು ಆಯ್ಕೆ ಮಾಡಬೇಕು.

## ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ಮುಖ್ಯ ನಿಯಮಗಳು ಯಾವುದೆಲ್ಲಾ?

ವಿದ್ಯಾರ್ಥಿಗಳು ಇಲ್ಲಿ ನೀಡಲಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು:

- ಲಿಖಿತ ಪರೀಕ್ಷೆ ಮತ್ತು ಇಂಟರ್ವ್ಯೂಗಾಗಿ ಹಾಲ್ ಟಿಕೆಟ್‌ನಲ್ಲಿ ಸೂಚಿಸಲಾದ ಸಮಯಕ್ಕಿಂತ ಅರ್ಧ ಗಂಟೆ ಮೊದಲೇ ಹಾಜರಾಗಿ ತಮ್ಮ ಪರೀಕ್ಷಾ ಸ್ಥಳವನ್ನು ಗುರುತಿಸಬೇಕು.
- ಪರೀಕ್ಷೆ ಪ್ರಾರಂಭವಾಗಿ ಒಂದು ಗಂಟೆಯ ನಂತರ ಬರುವ ವಿದ್ಯಾರ್ಥಿಯು ಅವಕಾಶವನ್ನು ಕಳೆದುಕೊಳ್ಳುತ್ತಾನೆ.ಪರೀಕ್ಷೆಗೆ ತಡವಾಗಿ ಬರುವವರಿಗೆ ಯಾವುದೇ ಹೆಚ್ಚುವರಿ ಸಮಯವನ್ನು ಅನುಮತಿಸಲಾಗುವುದಿಲ್ಲ. ಪರೀಕ್ಷೆ ಪ್ರಾರಂಭವಾಗಿ ಒಂದು ಗಂಟೆಯ ನಂತರವೇ ಪರೀಕ್ಷಾ ಕೊಠಡಿಯಿಂದ ಹೊರಹೋಗಲು ಅನುಮತಿಯಿರುವುದು.
- 100 ಪ್ರಶ್ನೆಗಳು ಒಬ್ಜೆಕ್ಟಿವ್ ಟೈಪ್ ಆಗಿರುತ್ತದೆ
- ಉತ್ತರಗಳನ್ನು OMR ಹಾಳೆಯಲ್ಲಿ ದಾಖಲಿಸಬೇಕು. OMR ಶೀಟನ್ನು ಹೇಗೆ ಬಳಸಬೇಕೆಂದು ಪರೀಕ್ಷೆಗೂ ಮುನ್ನವೇ ವಿದ್ಯಾರ್ಥಿಯು ಕಲಿತಿರಬೇಕು.
- ಮೂರು ಪ್ರಶ್ನೆಗಳನ್ನು ವಾಕ್ಯಗಳಲ್ಲಿ ಬರೆಯಬೇಕಾಗುತ್ತದೆ. ಉತ್ತರ ಪತ್ರಿಕೆಗಳನ್ನು ಜಾಮಿಯತುಲ್ ಹಿಂದ್ ನೀಡಲಿದೆ.
- ನೀಲಿ/ಕಪ್ಪು ಪೆನ್ನು ಮಾತ್ರ ಬಳಸಬೇಕು.ಪೆನ್ನು ವಿದ್ಯಾರ್ಥಿಯೇ ತರಬೇಕು.
- ಪರೀಕ್ಷಾ ಹಾಲ್ ಪ್ರವೇಶಿಸಲು ಮತ್ತು ಇಂಟರ್ವ್ಯೂಗೆ ಹಾಜರಾಗಲು ಹಾಲ್ ಟಿಕೆಟ್ (ಪ್ರಿಂಟ್ ಕಾಪಿ) ಕಡ್ಡಾಯವಾಗಿದೆ.ಹಾಲ್ ಟಿಕೆಟನ್ನು ಆನ್‌ಲೈನ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ವಿದ್ಯಾರ್ಥಿಯು ಪೆನ್ನು, ಸಾಮಾನ್ಯ ವಾಚ್ ಮತ್ತು ಹಾಲ್ ಟಿಕೆಟ್ ಹೊರತುಪಡಿಸಿ ಬೇರೆ ಯಾವುದನ್ನೂ ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಹೋಗಬಾರದು.ಪರೀಕ್ಷಾ ಹಾಲ್‌ನಲ್ಲಿ ಕ್ಯಾಲ್ಕುಲೇಟರ್‌ಗಳು ಮತ್ತು ಮೊಬೈಲ್ ಫೋನ್‌ಗಳಂತಹ ಎಲ್ಲಾ ಉಪಕರಣಗಳನ್ನು ನಿಷೇಧಿಸಲಾಗಿದೆ.
- ಇಂಟರ್ವ್ಯೂ ವೇಳೆಯಲ್ಲಿ ಮಾರ್ಕ್‌ಲಿಸ್ಟ್‌ಗಳು, ಹಿಫ್ಳ್ ಪ್ರಮಾಣಪತ್ರ, ಜಾಮಿಯಾ ಮಹಜ್ಜಾನ್, ಎಸ್‌ಎಸ್‌ಎಫ್ ಸಾಹಿತ್ಯೋತ್ಸವ, ಐಎಎಂಇ ಫೆಸ್ಟ್‌ಗಳು, ಸ್ಕೂಲ್ ಕಲೋತ್ಸವಗಳು,ಸ್ಕಾಲರ್ಶಿಪ್ ಗಳು ಸೇರಿದಂತೆ ಎಲ್ಲಾ ದಾಖಲೆಗಳ ಮೂಲ ಪ್ರಮಾಣಪತ್ರಗಳನ್ನು ತೆಗೆದುಕೊಂಡು ಬಂದು ಇಂಟರ್ವ್ಯೂ ನಡೆಸುವವರಿಗೆ ಮನವರಿಕೆ ಮಾಡಿ ಕೊಡಬೇಕು.
- ಇಂಟರ್ವ್ಯೂನಲ್ಲಿ ಮುಖ್ಯವಾಗಿ ಓದುವ ಸಾಮರ್ಥ್ಯ ಮತ್ತು ಇತರ

ಕೌಶಲ್ಯಗಳ ಕುರಿತು ಕೇಳಲಾಗುತ್ತದೆ.

- ಪರೀಕ್ಷೆಮತ್ತುಇಂಟರ್ವ್ಯೂಗೆಸಂಬಂಧಿಸಿದಇತರಮಾಹಿತಿಯನ್ನು ಸಂದರ್ಭಾನುಸಾರವಾಗಿ ಆನ್‌ಲೈನ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ.ಎಲ್ಲವನ್ನೂ ತಿಳಿದು ಮನದಟ್ಟು ಮಾಡಿಕೊಳ್ಳಬೇಕು.

## ಯಾವಾಗಿನಿಂದ ಅರ್ಜಿ ಸಲ್ಲಿಸಬಹುದು? ಅಂತಿಮ ದಿನಾಂಕ ಯಾವಾಗ?

2025 ಮಾರ್ಚ್ 20 ರಿಂದ ಏಪ್ರಿಲ್ 18 ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

## ಸಂಸ್ಥೆಗಳನ್ನು ಆಯ್ಕೆಮಾಡುವಾಗ ಏನೆಲ್ಲಾ ಪರಿಗಣಿಸಬೇಕು?

ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದ ಅತಿ ದೊಡ್ಡ ಹೆಜ್ಜೆಯಾಗಿದೆ ಇದು. ಪ್ರತಿಯೊಂದು ವಿದ್ಯಾರ್ಥಿಯ ಅಭಿರುಚಿಯು ವಿಭಿನ್ನವಾಗಿರುತ್ತದೆ. ಪ್ರತಿಯೊಂದು ಕ್ಯಾಂಪಸ್‌ಗಳು ವ್ಯತ್ಯಸ್ಥ ರೀತಿಯಲ್ಲಾಗಿದೆ ಕೋರ್ಸ್‌ಗಳನ್ನು ವಿನ್ಯಾಸಗೊಳಿಸುವುದು ಮತ್ತು ಅವುಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದು.ಆಹಾರ,ವಸತಿ ವ್ಯವಸ್ಥೆಗಳು ಮತ್ತು ಮೂಲಸೌಕರ್ಯಗಳಲ್ಲಿ ವ್ಯತ್ಯಾಸಗಳಿರಬಹುದು.ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಅವನ ಪೋಷಕರು ಪ್ರವೇಶ ಪಡೆಯಲಿಚ್ಛಿಸುವ ಸಂಸ್ಥೆಯ ಕುರಿತು ಚೆನ್ನಾಗಿ ತಿಳಿದುಕೊಂಡಿರಬೇಕು. ಸಂಸ್ಥೆಯು ಪಾಲಿಸುತ್ತಿರುವ ನಿಯಮಗಳು ಮತ್ತು ಶೈಕ್ಷಣಿಕ ಶಿಷ್ಟಾಚಾರಗಳ ಕುರಿತು ಚೆನ್ನಾಗಿ ಅರಿತಿರಬೇಕು.ಬಳಿಕ ಸಂಪೂರ್ಣ ಆತ್ಮವಿಶ್ವಾಸದೊಂದಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಮುಂದುವರೆಯಬೇಕು. ಒಟ್ಟಿನಲ್ಲಿ ಪ್ರತಿಯೊಂದು ಕಾಲೇಜು ನೀಡುವ ಸೌಲಭ್ಯಗಳ ಕುರಿತು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು.

ಸರಿಯಾಗಿ ತಿಳಿದುಕೊಳ್ಳದೆ ಸಂಸ್ಥೆಗಳ ಸೌಲಭ್ಯಗಳ ಕುರಿತು ಪ್ರವೇಶದ ಬಳಿಕ ದೂರು ನೀಡುವುದರಲ್ಲಿ ಅರ್ಥವಿಲ್ಲ, ಅಂತಹ ಯಾವುದೇ ವಿಷಯಗಳಿಗೂ ಜಾಮಿಯತುಲ್ ಹಿಂದ್ ಜವಾಬ್ದಾರಿಯಾಗಿರುವುದಿಲ್ಲ.

## ಜಾಮಿಯತುಲ್ ಹಿಂದ್ ನಿರ್ದೇಶಿಸಿರುವ ವಿದ್ಯಾರ್ಹತೆಯನ್ನು ಹೊಂದಿದವರಿಗೆ ಅರ್ಜಿ ಸಲ್ಲಿಸಬಹುದೇ?

ವಿದ್ಯಾರ್ಹತೆಗಳನ್ನು ಹೊಂದದ ವಿದ್ಯಾರ್ಥಿಗಳು ನೇರವಾಗಿ ಜಾಮಿಯತುಲ್ ಹಿಂದ್ ಕಛೇರಿಯನ್ನು ಸಂಪರ್ಕಿಸಬಹುದು.

## ಅಲೋಟ್ಮೆಂಟ್ ಯಾವ ರೀತಿಯಲ್ಲಿ ನಡೆಸಲಾಗುತ್ತದೆ?

ಒಂದು, ಎರಡು ಮತ್ತು ಸ್ಪಾಟ್ ಅಲೋಟ್ಮೆಂಟ್ ನಿಗದಿತ ದಿನಾಂಕಗಳಲ್ಲಿ ನಡೆಯಲಿದೆ.ಕಾಲಾನುಕಾಲಕ್ಕೆ ಆನ್‌ಲೈನ್ ಪೋರ್ಟಲ್ ಮುಖಾಂತರ

ವಿದ್ಯಾರ್ಥಿಗಳಿಗೆ ಅಲೋಟ್ಮೆಂಟಿನ ಕುರಿತು ಮಾಹಿತಿ ನೀಡಲಾಗುತ್ತದೆ. ಸ್ಪಾಟ್ ಅಲೋಟ್‌ಮೆಂಟ್‌ನಲ್ಲಿ ಭಾಗವಹಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಸೀಟುಗಳ ಲಭ್ಯತೆಗನುಸಾರವಾಗಿ ಜಾಮಿಯತುಲ್ ಹಿಂದ್ ಕಚೇರಿಯ ಮೂಲಕ ಪ್ರವೇಶವನ್ನು ಅನುಮತಿಸಲಾಗುತ್ತದೆ. ಮೊದಲ ಅಲೋಟ್‌ಮೆಂಟ್‌ನಲ್ಲಿ ಪಡೆದ ಸಂಸ್ಥೆಯನ್ನು ಬದಲಾಯಿಸಿ ಎರಡನೇ ಅಲೋಟ್‌ಮೆಂಟ್‌ಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಎರಡನೇ ಅಲೋಟ್‌ಮೆಂಟನ್ನು ತಿರಸ್ಕರಿಸಲು ಅವಕಾಶವಿರುವುದಿಲ್ಲ.

### ಸ್ಪಾಟ್ ಅಲೋಟ್‌ಮೆಂಟ್ ಎಂದರೇನು?

ವಿದ್ಯಾರ್ಥಿಯು ನೇರವಾಗಿ ಜಾಮಿಯತುಲ್ ಹಿಂದ್ ನಿಗದಿಪಡಿಸಿದ ಕೇಂದ್ರಕ್ಕೆ ಹಾಲ್ ಟಿಕೆಟ್‌ನೊಂದಿಗೆ ಬಂದು ಪ್ರವೇಶ ಪಡೆಯುವ ವಿಧಾನವಾಗಿದೆ ಇದು.ಒಂದು ಅಥವಾ ಎರಡು ಅಲೋಟ್‌ಮೆಂಟನ್ನು ಪಡೆಯದ ವಿದ್ಯಾರ್ಥಿಗಳಿಗಾಗಿದೆ ಈ ಸೌಲಭ್ಯ.ಸೀಟುಗಳು ಖಾಲಿ ಇರುವ ಸಂಸ್ಥೆಗಳಿಗೆ ಲಭ್ಯತಾನುಸಾರ ಸೀಟುಗಳನ್ನು ಹಂಚಲಾಗುತ್ತದೆ. ಮೊದಲು ಬಂದವರಿಗೆ ಮೊದಲ ಆದ್ಯತೆ

### ಅಡ್ಮಿಶನ್ ತೆಗೆದುಕೊಳ್ಳುವುದು ಹೇಗೆ?

ಅಲೋಟ್‌ಮೆಂಟ್‌ನಲ್ಲಿ ಸೀಟು ಪಡೆದ ವಿದ್ಯಾರ್ಥಿಯು ಪ್ರವೇಶ ಪಡೆಯಲು ಪೋಷಕರೊಂದಿಗೆ ಸಂಸ್ಥೆಗೆ ಖುದ್ದಾಗಿ ಭೇಟಿ ನೀಡಬೇಕು. ಇದಕ್ಕಾಗಿ ನಿಗದಿಪಡಿಸಿದ ಸಮಯವನ್ನು ಪ್ರತ್ಯೇಕವಾಗಿ ಪಾಲಿಸಬೇಕು. ಅಡ್ಮಿಶನ್ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳ ಕುರಿತು ಮಾಹಿತಿಯನ್ನು ಆನ್‌ಲೈನ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

### ಒಬ್ಬ ವಿದ್ಯಾರ್ಥಿಗೆ ತನ್ನಿಚ್ಛೆಯ 10 ಸಂಸ್ಥೆಗಳನ್ನು ಆಯ್ಕೆ ಮಾಡಬಹುದು - ಇದರ ವಿಧಾನವನ್ನು ತಿಳಿಸಿಕೊಡುತ್ತೀರಾ?

ವಿದ್ಯಾರ್ಥಿಯು ತಾನು ಯಾವ ಸಂಸ್ಥೆಯಲ್ಲಿ ಕಲಿಯಲಿಚ್ಛಿಸುವನೋ ಆ ಸಂಸ್ಥೆಯನ್ನು ಮೊದಲು ಆಯ್ಕೆ ಮಾಡಿಕೊಳ್ಳಬೇಕು.ಆ ಸಂಸ್ಥೆಯಲ್ಲಿ ಪ್ರವೇಶ ಸಿಗದಿದ್ದರೆ ಎರಡನೆಯ ಸಂಸ್ಥೆಯನ್ನೂ, ಅದೂ ಸಿಗದಿದ್ದರೆ ಮೂರನೇಯ ಸಂಸ್ಥೆಯನ್ನು ಹೀಗೆ ಕ್ರಮವಾಗಿ 10 ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು.ಈ ಸಂಸ್ಥೆಗಳಲ್ಲಿ ರ‍್ಯಾಂಕಿನ ಆಧಾರದ ಮೇಲೆ ಪ್ರವೇಶವನ್ನು ನೀಡಲಾಗುತ್ತದೆ. ಸಿಗದಿದ್ದಲ್ಲಿ ಎರಡನೇ ಅಲೋಟ್‌ಮೆಂಟ್ ಮೂಲಕ ಪ್ರವೇಶವನ್ನು ಪಡೆಯಬಹುದು.ಅದೂ ಸಿಗದಿದ್ದರೆ ಸ್ಪಾಟ್ ಅಡ್ಮಿಷನ್ ಮೂಲಕ ಪ್ರವೇಶವನ್ನು ಪಡೆಯಬಹುದು.

### ಅರ್ಜಿ ಸಲ್ಲಿಸಿದ ಎಲ್ಲರಿಗೂ ಸೀಟುಗಳನ್ನು ಖಾತರಿಪಡಿಸಲಾಗಿದೆಯೇ?

ಇಂದಿನ ಪರಿಸ್ಥಿತಿಯಲ್ಲಿ ಧಾರ್ಮಿಕ ಶಿಕ್ಷಣ ಹಾಗೂ ಧಾರ್ಮಿಕ ಜೀವನ ನಡೆಸುವುದು ಅತೀ ಅವಶ್ಯಕವಾಗಿದ್ದು ಅರ್ಜಿ ಸಲ್ಲಿಸಿದ ಎಲ್ಲರಿಗೂ ಸೀಟು ನೀಡಲು ಜಾಮಿಯತುಲ್ ಹಿಂದ್ ಪ್ರಯತ್ನಿಸಲಿದೆ.ಕೇರಳ

ಮುಸ್ಲಿಂ ಜಮಾಅತಿನ ಅಡಿಯಲ್ಲಿ ಇದಕ್ಕಾಗಿ ವ್ಯಾಪಕ ಯೋಜನೆಗಳನ್ನು ರೂಪಿಸಲಾಗಿದೆ.

**ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಪ್ರವೇಶವನ್ನು ಬಯಸುವ ಸಂಸ್ಥೆಗಳನ್ನು ನಂತರ ಬದಲಾಯಿಸಬಹುದೇ?**

ಇಲ್ಲ.ಅದೇ ವೇಳೆ ಮೊದಲ ಅಲೋಟ್‌ಮೆಂಟ್‌ನಲ್ಲಿ ಸಿಕ್ಕಿದ ಸಂಸ್ಥೆಯನ್ನು ಬದಲಾಯಿಸಿ ಎರಡನೇ ಅಲೋಟ್‌ಮೆಂಟಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಎರಡನೇ ಅಲೋಟ್‌ಮೆಂಟನ್ನು ತಿರಸ್ಕರಿಸಲು ಅವಕಾಶವಿರುವುದಿಲ್ಲ.ಆದ್ದರಿಂದ ಸಂಸ್ಥೆಗಳನ್ನು ಆಯ್ಕೆಮಾಡುವಾಗ ನೋಡಿ ಆಯ್ಕೆ ಮಾಡಿ.

**ಜಾಮಿಯತುಲ್ ಹಿಂದಿನ ಕೆಳಗೆ ಎಷ್ಟು ಕಾಲೇಜುಗಳಿವೆ?ಎಲ್ಲಾ ಕಾಲೇಜುಗಳಿಗೆ ಪ್ರವೇಶಾತಿ ಏಕ ಜಾಲಗ ಪರೀಕ್ಷೆಯ ಮೂಲಕ ಮಾತ್ರವಾ?**

300ಕ್ಕೂ ಹೆಚ್ಚು ಸಂಸ್ಥೆಗಳು ಜಾಮಿಯತುಲ್ ಹಿಂದಿನ ಅಡಿಯಲ್ಲಿ ಕಾರ್ಯಾಚರಿಸುತ್ತಿದೆ.ಎಲ್ಲಾ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆ ಏಕ ಜಾಲಗ ವ್ಯವಸ್ಥೆಯ ಮೂಲಕ ಮಾತ್ರವಾಗಿದೆ.

**ಕೇರಳದ ಎಲ್ಲಾ ಪ್ರಮುಖ ಸಂಸ್ಥೆಗಳು ಇದರ ಭಾಗವೇ?**

ಹೌದು.ಸಂಸ್ಥೆಗಳ ಪಟ್ಟಿ ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

**ಮ್ಯಾನೇಜ್‌ಮೆಂಟ್ ಸೀಟ್‌ಗೆ ಪ್ರವೇಶ ಪಡೆಯಲು ಏನು ಮಾಡಬೇಕು?**

ಪ್ರತೀ ಸಂಸ್ಥೆಯಲ್ಲಿ ನಿಗದಿತ ಶೇಕಡಾವಾರು ಮ್ಯಾನೇಜ್ಮೆಂಟ್ ಕೋಟಾದಲ್ಲಿ ಪ್ರವೇಶವನ್ನು ಅನುಮತಿಸಲಾಗುವುದು.ಅಂತಹ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯ ಮುಂಚಿತವಾಗಿ ಆಯಾ ಸಂಸ್ಥೆಯನ್ನು ಸಂಪರ್ಕಿಸಬೇಕು.

ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಪ್ರವೇಶ ಪಡೆಯಲು ಏಕ ಜಾಲಗ ವ್ಯವಸ್ಥೆಯ ಮೂಲಕ ಅರ್ಜಿ ಸಲ್ಲಿಸುವುದು ಮತ್ತು J-SAT ಪರೀಕ್ಷೆ ಬರೆಯುವುದು ಕಡ್ಡಾಯವಾಗಿದೆ. ಮ್ಯಾನೇಜ್ಮೆಂಟ್ ಕೋಟಾದ ಅಡಿಯಲ್ಲಿ ಅಡ್ಮಿಶನ್ ಗಾಗಿ ಪ್ರತಿಯೊಂದು ಸಂಸ್ಥೆಯು ವಿಭಿನ್ನ ಷರತ್ತುಗಳನ್ನು ಅಳವಡಿಸಿಕೊಳ್ಳಬಹುದು.

**ಮೊದಲ ಅಲೋಟ್ಮೆಂಟಿನಲ್ಲಿ ಆಯ್ಕೆಯಾದ ಸಂಸ್ಥೆಯನ್ನು ತಿರಸ್ಕರಿಸಿ ಎರಡನೇ ಅಲೋಟ್‌ಮೆಂಟಿನಲ್ಲಿ ಬೇರೆ ಸಂಸ್ಥೆಯನ್ನು ಆಯ್ಕೆ ಮಾಡಬಹುದೇ?**

ಆಯ್ಕೆ ಮಾಡಬಹುದು.ಮೊದಲ ಅಲೋಟ್‌ಮೆಂಟ್‌ನ ನಂತರ ಇದಕ್ಕಾಗಿ ಪ್ರತ್ಯೇಕ ಸಮಯವನ್ನು ನಿಗದಿಪಡಿಸಲಾಗುತ್ತದೆ.

### ಎರಡನೇ ಅಲೋಟ್‌ಮೆಂಟ್‌ನಲ್ಲಿ ಆಯ್ಕೆಯಾದ ಸಂಸ್ಥೆಯನ್ನು ತಿರಸ್ಕರಿಸಿ ಸ್ಪಾಟ್ ಅಲೋಟ್‌ಮೆಂಟ್‌ನಲ್ಲಿ ಬೇರೆ ಸಂಸ್ಥೆಯನ್ನು ಆಯ್ಕೆ ಮಾಡಬಹುದೇ?

ಇಲ್ಲ.ಎರಡನೇ ಅಲೋಟ್‌ಮೆಂಟ್‌ನಲ್ಲಿ ಪಡೆದ ಸಂಸ್ಥೆಯನ್ನು ಸ್ವೀಕರಿಸಿ ಅಲ್ಲಿ ಅಡ್ಮಿಶನ್ ಪಡೆಯುವುದು ಕಡ್ಡಾಯವಾಗಿದೆ.ಅಂದರೆ,ಮೊದಲ ಅಲೋಟ್‌ಮೆಂಟ್‌ನಲ್ಲಿ ಆಯ್ಕೆಯಾದ ಸಂಸ್ಥೆಯನ್ನು ತಿರಸ್ಕರಿಸಿ ಎರಡನೇ ಅಲೋಟ್‌ಮೆಂಟ್‌ನಲ್ಲಿ ಬೇರೆ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬಹುದು.ಆದರೆ ಎರಡನೇ ಅಲೋಟ್‌ಮೆಂಟಿನಲ್ಲಿ ಆಯ್ಕೆಯಾದ ಸಂಸ್ಥೆಯನ್ನು ತಿರಸ್ಕರಿಸಿ ಸ್ಪಾಟ್ ಅಲೋಟ್‌ಮೆಂಟ್‌ನಲ್ಲಿ ಮತ್ತೊಂದು ಸಂಸ್ಥೆಯನ್ನು ಆಯ್ಕೆ ಮಾಡಲು ಅವಕಾಶವಿಲ್ಲ.

### ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ/ಸ್ಪಾಟ್ ಅಲೋಟ್‌ಮೆಂಟ್ ಸೀಟು ಸಿಗದ ವಿದ್ಯಾರ್ಥಿಗಳು ಏನು ಮಾಡಬೇಕು?

ಜಾಮಿಯತುಲ್ ಹಿಂದ್ ಕಚೇರಿಯನ್ನು ನೇರವಾಗಿ ಸಂಪರ್ಕಿಸಿ ಪ್ರವೇಶವನ್ನು ಪಡೆಯಬಹುದು.

### ಆಯ್ಕೆಮಾಡಬೇಕಾದ ಸಂಸ್ಥೆಯನ್ನು ಹುಡುಕಲು ಏನು ಮಾಡಬೇಕು?

ಎಲ್ಲಾ ಸಂಸ್ಥೆಗಳ ನಿಖರ ಮಾಹಿತಿಯು www.jamiathulhind.com ವೆಬ್‌ಸೈಟಿನಲ್ಲಿ ಲಭ್ಯವಿದೆ.ಆದರೂ ಆಯ್ಕೆಮಾಡಲಿಚ್ಚಿಸುವ ಪ್ರತಿಯೊಂದು ಸಂಸ್ಥೆಯನ್ನೂ ನೇರವಾಗಿ ಹೋಗಿ ನೋಡಿ ಅಲ್ಲಿಯ ಸೌಲಭ್ಯಗಳನ್ನು ಮತ್ತು ಕಲಿಕೆಯ ಶೈಲಿಯನ್ನು ಅರ್ಥಮಾಡಿಕೊಳ್ಳುವುದು ಸೂಕ್ತ.

### ಜಾಮಿಯತುಲ್ ಹಿಂದಿನ ಅಡಿಯಲ್ಲಿರುವ ಕೋರ್ಸ್‌ಗಳ ವೈಶಿಷ್ಟ್ಯತೆ ಏನು?

- ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಆಶಯ ಮತ್ತು ನಿರ್ದೇಶಾನುಸಾರ ಕೇರಳದ ಒಳಗೂ ಹೊರಗೂ ಇರುವ ಕ್ಯಾಂಪಸ್‌ಗಳು ಜಾಮಿಯತುಲ್ ಹಿಂದಿನ ಅಡಿಯಲ್ಲಿ ಅಫ್ಲಿಯೇಟಾಗಿ ಕಾರ್ಯಾಚರಿಸುತ್ತಿವೆ.
- ಅಡ್ಮಿಶನ್,ಪಠ್ಯಕ್ರಮ ಮತ್ತು ಪರೀಕ್ಷೆಯಂತಹ ಎಲ್ಲಾ ಶೈಕ್ಷಣಿಕ ವಿಷಯಗಳನ್ನು ಜಾಮಿಯತುಲ್ ಹಿಂದ್ ನೇರವಾಗಿ ಕಾರ್ಯನಿರ್ವಹಿಸುತ್ತದೆ.
- ಪ್ರತಿಯೊಂದು ಕಾಲೇಜಿನಲ್ಲೂ ಇಸ್ಲಾಮಿಕ್ ವಿಷಯಗಳಲ್ಲಿ ಅಧಿಕೃತ ಮತ್ತು ಆಳವಾದ ಪಠ್ಯಕ್ರಮ ಮತ್ತು ಕೋರ್ಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಇಸ್ಲಾಮಿಕ್ ಫೌಂಡೇಶನ್ ಕೋರ್ಸಿನಿಂದ ಹಿಡಿದು ಸಂಶೋಧನಾ ಅಧ್ಯಯನವನ್ನು ಕೂಡಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಸಂಶೋಧನಾ ಕೋರ್ಸ್‌ಗಳಿಗೆ ಉನ್ನತ ಫೆಲೋಶಿಪ್‌ಗಳನ್ನು ಸಹ ನೀಡಲಾಗುತ್ತದೆ.

- ಎಲ್ಲಾ ಕೋರ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಲಾಗುತ್ತದೆ.
- ಧಾರ್ಮಿಕ ಲೌಕಿಕ ಶಿಕ್ಷಣದ ಅತ್ಯುತ್ತಮ ಮಾದರಿಯನ್ನಾಗಿದೆ ಜಾಮಿಯತುಲ್ ಹಿಂದ್ ಸಂಯೋಜಿಸಿರುವುದು.
- 7 ನೇ ತರಗತಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಲೌಕಿಕ ಶಿಕ್ಷಣದಲ್ಲಿ 8ನೇ ತರಗತಿಯಿಂದ Ph.D ವರೆಗೂ ಧಾರ್ಮಿಕ ಶಿಕ್ಷಣದಲ್ಲಿ ಫೌಂಡೇಶನ್‌ನಿಂದ ಮುತವ್ವಲ್, ತಖಸ್ಸುಸ್-ದಕ್ತೂರವರೆಗೂ ಕಲಿಯಲು ಅವಕಾಶ.
- 10ನೇ ತರಗತಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಲೌಕಿಕ ಶಿಕ್ಷಣದಲ್ಲಿ ಪ್ಲಸ್ ಒನ್‌ನಿಂದ ಪಿಎಚ್‌ಡಿ ವರೆಗೂ ಧಾರ್ಮಿಕ ಶಿಕ್ಷಣದಲ್ಲಿ ಫೌಂಡೇಶನ್‌ನಿಂದ ಮುತವ್ವಲ್,ತಖಸ್ಸುಸ್-ದಕ್ತೂರ ವರೆಗೂ ಕಲಿಯಲು ಅವಕಾಶ.
- ಫೌಂಡೇಶನ್(8ನೇತರಗತಿಯಿಂದ),ಇಂಟರ್ಮೀಡಿಯೇಟ್(ಪ್ಲಸ್ ಒನ್‌ನಿಂದ) ತರಗತಿಗಳಿಗೆ ಏಕಜಾಲಗವ್ಯವಸ್ಥೆಯ ಮೂಲಕವಾಗಿದೆ ಪ್ರವೇಶ. ಪಿಜಿ ಮತ್ತು ಸಂಶೋಧನಾ ಕೋರ್ಸ್‌ಗಳಿಗೂ ನೇರ ಪ್ರವೇಶವಿದೆ.
- ಮಲಯಾಳಂ, ಅರಬಿಕ್, ಉರ್ದು, ಇಂಗ್ಲಿಷ್, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಬೋಧನೆ ಮತ್ತು ಕಲಿಕೆಯು ಲಭ್ಯವಿದೆ. ಇದರ ಜೊತೆಗೆ ಅನೇಕ ವಿದೇಶೀ ಭಾಷೆಗಳನ್ನು ಸಹ ಕಲಿಯುವ ಸೌಲಭ್ಯಗಳನ್ನುವಿವಿಧಕ್ಯಾಂಪಸ್‌ಗಳಲ್ಲಾಗಿಆಯೋಜಿಸಲಾಗಿದೆ.
- ಎಲ್ಲಾ ಹಂತದ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತಹ ರೀತಿಯಲ್ಲಿ ಪಠ್ಯಕ್ರಮಗಳು ಮತ್ತು ವೈಜ್ಞಾನಿಕ ಅಧ್ಯಯನ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ.
- ಜಾಗತಿಕ ವಿದ್ವಾಂಸರನ್ನು ಸೃಷ್ಟಿಸುವ ಮಹತ್ತರವಾದ ಧ್ಯೇಯದೊಂದಿಗೆವಿವಿಧಯೋಜನೆಗಳನ್ನುರೂಪಿಸಲಾಗುತ್ತಿದೆ.
- ಪಠ್ಯೇತರ ವಿಷಯಗಳಿಗಾಗಿ ಗುಂಪು ಕಾರ್ಯಕ್ರಮಗಳು, ತರಬೇತಿಗಳುಮತ್ತುಸಾಹಿತ್ಯಸ್ಪರ್ಧೆಗಳನ್ನುಆಯೋಜಿಸಲಾಗುತ್ತದೆ. ಕ್ಯಾಂಪಸ್‌ಗಳು ನವೀನವಾದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ.
- ಎಲ್ಲಾವಿದ್ಯಾರ್ಥಿಗಳಿಗೂಉಚಿತಶಿಕ್ಷಣವನ್ನುನೀಡುವುದರಜೊತೆಗೆ ಮೆರಿಟ್ ಕಮ್ ಅಂದರೆ ವಿದ್ಯಾರ್ಥಿವೇತನಗಳು,ಸಂಶೋಧನಾ ಫೆಲೋಶಿಪ್‌ಗಳು ಮತ್ತು ಸಂಶೋಧನಾ ಪ್ರೋಜೆಕ್ಟ್ ಗಳು ಲಭಿಸಲಿದೆ.
- ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳು, ವಿದ್ಯಾರ್ಥಿ ಪುಷ್ಟೀಕರಣ ಕಾರ್ಯಕ್ರಮಗಳು, ಸುಧಾರಿತ ನಾಯಕತ್ವ ತರಬೇತಿ, ಜಾಗತಿಕ ಭಾಷಾ ಮಾಸ್ಟರಿ ಕೋರ್ಸ್‌ಗಳು,ವಿದ್ಯಾರ್ಥಿ

ಮತ್ತು ಅಧ್ಯಾಪಕರಿಗೆ ಜಂಟಿಯಾಗಿ ನಡೆಸುವ ಕಾರ್ಯಕ್ರಮಗಳ ಹೊರತಾಗಿ ವಿದ್ಯಾರ್ಥಿಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸ್ಪರ್ಧೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ವಿಶೇಷ ತರಬೇತಿಯನ್ನು ಸಹ ನೀಡಲಾಗುತ್ತದೆ.

- ಟ್ಯಾಲೆಂಟ್ ಟೆಸ್ಟ್ ಗಳು,ಎಕ್ಸಲೆನ್ಸ್ ಅವಾರ್ಡ್ ಗಳು,ವಾರ್ಷಿಕ ಜಾಮಿಯಾ ಮಹಾರ್ಜನ್, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ
- ಶೈಕ್ಷಣಿಕ ಸಹಯೋಗಗಳು,ಸಿವಿಲ್ ಸರ್ವೀಸ್ ಪರೀಕ್ಷೆಗಳಿಗೆ ಫೌಂಡೇಶನ್‌ಕೋರ್ಸ್‌ಗಳುಮತ್ತುಇಂಟೆನ್ಸೀವ್‌ಕೋರ್ಸ್‌ಗಳು,ನೆಟ್ / ಜೆಆರ್‌ಎಫ್ ಪರೀಕ್ಷೆಗಳಿಗೆ ವಿಶೇಷ ತರಬೇತಿ, ಅಂತರಾಷ್ಟ್ರೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ವಿಶೇಷ ತರಬೇತಿಗಳು ಸೇರಿದಂತೆ ವಿದ್ಯಾರ್ಥಿಗಳನ್ನು ಉನ್ನತ ನಾಗರಿಕರನ್ನಾಗಿಮಾಡಲುಸಹಾಯಕವಾಗುವಂತಹಹಲವಾರು ತರಬೇತಿಗಳನ್ನುವಿವಿಧಕ್ಯಾಂಪಸ್‌ಗಳಲ್ಲಾಗಿಸಜ್ಜೀಕರಿಸಲಾಗಿದೆ.

**ಅಡ್ಮಿಶನ್, ಅಲೋಟ್ಮೆಂಟ್, ಅರ್ಜಿ ಇತ್ಯಾದಿಗಳ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆಯಲು ಏನು ಮಾಡಬೇಕು?**

ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಎಲ್ಲವನ್ನೂ ವಿವರವಾಗಿ ನೀಡಲಾಗಿದೆ.ವಿದ್ಯಾರ್ಥಿಗಳು ಮತ್ತು ಪೋಷಕರು ಎಲ್ಲವನ್ನೂ ಕಡ್ಡಾಯವಾಗಿ ಓದಬೇಕು.ಇಂಗ್ಲಿಷ್, ಮಲಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ಲಭ್ಯವಿದೆ.

**ಜಾಮಿಯತುಲ್ ಹಿಂದ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಧಾರ್ಮಿಕ ಅಧ್ಯಯನ ಕಡ್ಡಾಯವೇ?**

ಹೌದು.ಆಳವಾದ ಧಾರ್ಮಿಕ ಶಿಕ್ಷಣವು ಮುಖ್ಯ ಉದ್ದೇಶವಾಗಿದೆ. ಅದರ ಜೊತೆಗೆ ಉನ್ನತ ಲೌಕಿಕ ಶಿಕ್ಷಣವನ್ನೂ ನೀಡಲಾಗುತ್ತದೆ.

**ವಿದ್ಯಾರ್ಥಿಗಳ ಸಮವಸ್ತ್ರ ಹೇಗಿರುತ್ತದೆ?**

ಆಯಾ ಪ್ರದೇಶದ ಮುಸ್ಲಿಂ ಧಾರ್ಮಿಕ ವಿದ್ವಾಂಸರ ಉಡುಗೆ ಯಾಗಿರುತ್ತದೆ ಸಮವಸ್ತ್ರ. ಸಂಸ್ಥೆಗಳನ್ನು ಅವಲಂಬಿಸಿ ಸ್ವಲ್ಪ ವ್ಯತ್ಯಾಸಗಳಿರಬಹುದು.

**ಕೋರ್ಸ್ ಪ್ರಾರಂಭಿಸಿದ ನಂತರ ವಿದ್ಯಾರ್ಥಿಯು ಸಂಸ್ಥೆಯನ್ನು ಬದಲಾಯಿಸಬಹುದೇ?**

ಪ್ರಥಮ ಸೆಮಿಸ್ಟರ್ ಪರೀಕ್ಷೆಯ ಮುಂಚಿತವಾಗಿ ನಿರ್ದಿಷ್ಟ ಷರತ್ತುಗಳೊಂದಿಗೆ ಬದಲಾಯಿಸಬಹುದು.

**ಇನ್ನೂ ಸಂಶಯಗಳಿದೆಯೇ?**

ಕರೆ ಮಾಡಿ:

+91 62354 92844, 0495-277 2844